ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **2257**

ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 26-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಇತ್ತೀಚಿಗೆ ಸರ್ಕಾರ ನೀಡಿದ ಅಂಕಿ ಅಂಶಗಳ ಪ್ರಕಾರ 21.96 ಲಕ್ಷ ವಾಹನಗಳು ಹೊಸ ಸಾರಿಗೆ ನಿಯಮದಂತೆ ಅನುಪಯುಕ್ತವಾಗುವ (ಗುಜರಿಗೆ ಸೇರುವ) ಸಂಭವವಿದ್ದು, ಇದರಿಂದಾಗಿ ಸಾಲ ಮಾಡಿ ಕಷ್ಟದಲ್ಲಿ ವಾಹನ ಖರೀದಿಸಿ ಜೀವನ ನಿರ್ವಹಣೆ ಮಾಡುವ ವಾಹನ ಮಾಲೀಕರಿಗೆ ತೊಂದರೆಯಾಗುವುದಿಲ್ಲವೇ;	ಕೇಂದ್ರ ಸರ್ಕಾರವು Vehicle Scrappage Policy ಯನ್ನು ಜಾರಿಗೆ ತರಲು 2021-22ನೇ ಸಾಲಿನ ಆಯವ್ಯಯದ ಕ್ರಮ ಸಂಖ್ಯೆ:36ರಲ್ಲಿ ಘೋಷಣೆ ಮಾಡಿದ್ದು, ವಾಹನಗಳ ಮಾಲೀಕರ ಐಚ್ಛಿಕತೆಯ ಮೇರೆಗೆ 20 ವರ್ಷ ಮೀರಿದ ಸಾರಿಗೇತರ ವಾಹನಗಳು ಮತ್ತು 15 ವರ್ಷ ಮೀರಿದ ಸಾರಿಗೆ ವಾಹನಗಳನ್ನು ನಾಶಪಡಿಸಲು ಪ್ರಸ್ತಾಪಿಸಲಾಗಿದೆ. ಈ ಬಗ್ಗೆ ಮಾರ್ಗಸೂಚಿಗಳು ಬಂದ ನಂತರ ರಾಜ್ಯ ಸರ್ಕಾರದಿಂದ ಸೂಕ್ತ ಕ್ರಮ ವಹಿಸಲಾಗುವುದು.
ಆ.	ಈ ಕುರಿತಂತೆ ಗುಜರಿಗೆ ಸೇರಲ್ಪಡುವ ವಾಹನ ಮಾಲೀಕರಿಗೆ ಸರ್ಕಾರ ಪರಿಹಾರ / ಅನುಕೂಲ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಸ್ವೀಕರಿಸಿದ ನಂತರ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.
ಇ.	ಈ ಕುರಿತಂತೆ ಸರ್ಕಾರದ ನಿಲುವೇನು? (ಮಾಹಿತಿ ಒದಗಿಸುವುದು)	

ಟಿಡಿ 69 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.